## 33. ಉದ್ಯೋಗ ಸೃಷ್ಟಿಗೆ ಒತ್ತು

ಕಳೆದ ಮೂರು ದಿನ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಕೃಷಿ, ಮೀನುಗಾರಿಕೆ ಸೇರಿದಂತೆ ದೇಶದ ಪ್ರಮುಖ ವಲಯಗಳ ಅಭಿವೃದ್ಧಿಗಾಗಿ ಪ್ಯಾಕೇಜ್ ಘೋಷಣೆ ಮಾಡಿದ್ದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ನಾಲ್ಕನೇ ಕಂತಿನ ಪ್ಯಾಕೇಜನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಎಂಟು ವಲಯಗಳ ರಚನಾತ್ಮಕ ಸುಧಾರಣೆಗೆ ಒತ್ತು ನೀಡಲಾಗಿದೆ. ಈ ಮೂಲಕ ಬಂಡವಾಳದ ಹರಿವು ಹೆಚ್ಚುವಂತೆ ಮತ್ತು ಉದ್ಯೋಗ ಸೃಷ್ಟಿ ವೃದ್ಧಿಗೊಳಿಸುವತ್ತ ಸಚಿವರು ಗಮನ ಹರಿಸಿದ್ದಾರೆ.

**ಕಲ್ಲಿದ್ದಲಿಗೆ ಯಾರ ಹಂಗಿಲ್ಲ:–** ದೇಶದಲ್ಲಿ ಭಾರೀ ಪ್ರಮಾಣದ ಕಲ್ಲಿದ್ದಲು ಅದಿರಿನ ಪ್ರಮಾಣ ಹೊಂದಿದ್ದರೂ ಇಂದಿಗೂ ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇದನ್ನು ಮನಗಂಡು ದೇಶೀಯ ವ್ಯಾಪ್ತಿಯಲ್ಲೇ ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಕೇಂದ್ರ ಸರ್ಕಾರದ ಕೈಯಲಿದ್ದ ಏಕ ಸ್ವಾಮ್ಯತೆಯನ್ನು ತೆಗೆದು ಖಾಸಗಿಯವರ ಪ್ರವೇಶಕ್ಕೂ ಅನುವು ಮಾಡಿಕೊಡಲಾಗಿದೆ. ಈ ವಲಯದ ಮೂಲ ಸೌಕರ್ಯಕ್ಕಾಗಿ ರೂ.50 ಸಾವಿರ ಕೋಟಿ ನೀಡಲು ಉದ್ದೇಶಿಸಲಾಗಿದೆ.

- ಈ ಕೂಡಲೇ 50 ಬ್ಲಾಕ್ ಹರಾಜಿಗೆ ಲಭ್ಯ
- ಆದಾಯ ಹಂಚಿಕೆ ಮಾದರಿಯಲ್ಲಿ ಗಣಿಗಾರಿಕೆ
- ಅನಿಲ ರೂಪದಲ್ಲಿ ಕಲ್ಲಿದ್ದಲು ಹೊರತೆಗೆಯುವುದು, ಪರಿಸರಕ್ಕೆ ಹೆಚ್ಚಿನ ಹಾನಿ ಇಲ್ಲ.

ದೇಶದಲ್ಲಿ ವಿಪುಲ ಪ್ರಮಾಣದ ಖನಿಜಗಳಿದ್ದು, ಇವುಗಳ ಬಳಕೆಗೆ ಆಸ್ಪದ ನೀಡಲಾಗಿದೆ. ಇದಕ್ಕಾಗಿ ಖನಿಜಗಳ ಪರಿಶೋಧನೆ, ಗಣಿಗಾರಿಕೆ ಮತ್ತು ಉತ್ಪಾದನೆಯನ್ನು ಸಂಯೋಜನೆಗೊಳಿಸಲಾಗಿದೆ.

- ಈ ಕೂಡಲೇ 500 ಗಣಿ ಬ್ಲಾಕ್‌ಗಳು ಹರಾಜು
- ಮುಕ್ತ ಮತ್ತು ಪಾರದರ್ಶಕ ಹರಾಜು ಪ್ರಕ್ರಿಯೆ
- ಬಾಕ್ಸೈಟ್ ಮತ್ತು ಕಲ್ಲಿದ್ದಲು ಒಳಗೊಂಡ ಜಂಟಿ ಹರಾಜು
- ಅಲ್ಯೂಮಿನಿಯಂ ಉದ್ಯಮಕ್ಕೆ ಉಪಯೋಗ
- ಕ್ಯಾಪ್ಟೀವ್, ನಾನ್ – ಕ್ಯಾಪ್ಟೀವ್ ವ್ಯತ್ಯಾಸವಿಲ್ಲ

**ಮೇಕ್ ಇನ್ ಇಂಡಿಯಾ:** ರಕ್ಷಣಾ ಇಲಾಖೆಗೆ ಬೇಕಾಗಿರುವ ಆಯುಧಗಳ ಉತ್ಪಾದನೆಯಲ್ಲಿ ಇನ್ನು ಮುಂದೆ ಹೊರದೇಶಗಳ ಅವಲಂಬನೆ ಬೇಡ ಎಂಬ ನಿರ್ಧಾರಕ್ಕೆ ಕೇಂದ್ರ ಸರ್ಕಾರ ಬಂದಿದೆ. ಕೆಲವೊಂದು ಹೈಟೆಕ್ ಶಸ್ತ್ರಾಸ್ತ್ರ ಹೊರತುಪಡಿಸಿ ಉಳಿದ ಆಯುಧಗಳ ಆಮದಿಗೆ ನಿಷೇಧ ಹೇರಿದೆ.

- ಸದ್ಯದಲ್ಲೇ ಆಮದು ನಿಷೇಧಪಟ್ಟಿಗೆ ಸೇರುವ ಶಸ್ತ್ರಾಸ್ತ್ರಗಳ ಪಟ್ಟಿ ಬಿಡುಗಡೆ
- ಆಮದು ಮಾಡಿಕೊಳ್ಳುವ ಬಿಡಿ ಭಾಗಗಳನ್ನು ಸ್ಥಳೀಯವಾಗಿ ತಯಾರಿಸುವುದು.
- ಆಯುಧಗಳ ಫ್ಯಾಕ್ಟರಿ ಮಂಡಳಿಯನ್ನು ಕಾರ್ಪೋರೈಟೇಸೇಶನ್ ಮಾಡುವುದು (ಆದರೆ ಇದು ಖಾಸಗೀಕರಣವಲ್ಲ)
- ರಕ್ಷಣಾ ಇಲಾಖೆಯಲ್ಲಿನ ವಿದೇಶಿ ನೇರ ಬಂಡವಾಳ ಪ್ರಮಾಣ ಶೇ.49 ರಿಂದ ಶೇ.74ಕ್ಕೆ ಏರಿಕೆ.
- ಬಾಹ್ಯಾಕಾಶ ರಂಗದಲ್ಲಿ ಖಾಸಗೀಕರಣ ಉಪಗ್ರಹ ಉಡಾವಣೆಗೆ ಅವಕಾಶ
- ಸಾಮಾಜಿಕ ಮೂಲಸೌಕರ್ಯ ಯೋಜನೆಗಳಿಗೆ ರೂ.8,100 ಕೋಟಿ ಅನುದಾನ
- ಕೇಂದ್ರಾಡಳಿತ ಪ್ರದೇಶಗಳಲ್ಲಿನ ಡಿಸ್ಕಾಂ ಕಂಪನಿಗಳ ಖಾಸಗೀಕರಣ
- ವೈದ್ಯಕೀಯ ಕ್ಷೇತ್ರಕ್ಕಾಗಿ ಅಣು ಕ್ಷೇತ್ರದಲ್ಲೂ ಖಾಸಗಿಯವರ ಪ್ರವೇಶಕ್ಕೆ ಅನುಮತಿ

**ಇನ್ನಷ್ಟು ವಿಮಾನ ನಿಲ್ದಾಣ ಖಾಸಗಿಗೆ:–** ಈಗಾಗಲೇ 6 ವಿಮಾನ ನಿಲ್ದಾಣಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಡಿ ನೀಡಲಾಗಿದ್ದು, ಮೂರನ್ನು ಕಾರ್ಯಾಚರಣೆಗೆ ನೀಡಲಾಗಿದೆ. ಈ ವಿಮಾನ ನಿಲ್ದಾಣಗಳಿಂದ ವಾರ್ಷಿಕ ರೂ.1 ಸಾವಿರ ಕೋಟಿ ಆದಾಯ ಬರುತ್ತಿದೆ. 2ನೇ ಹಂತದಲ್ಲಿ ಇನ್ನೂ 6 ವಿಮಾನ ನಿಲ್ದಾಣಗಳನ್ನು ಖಾಸಗಿಗೆ ನೀಡಲಾಗುತ್ತದೆ. ಇವುಗಳ ಬಿಡ್ಡಿಂಗ್ ಪ್ರಕ್ರಿಯೆ ತಕ್ಷಣವೇ ಶುರುವಾಗಲಿದೆ. ಜೊತೆಗೆ ದೇಶಾದ್ಯಂತ ಇನ್ನಷ್ಟು ವಿಮಾನಗಳನ್ನು ಓಡಿಸಲು ಏರಸ್ಪೇಸ್ ಮುಕ್ತಗೊಳಿಸಲು ನಿರ್ಧರಿಸಲಾಗಿದೆ. ಇದರಿಂದ ವಾರ್ಷಿಕ ರೂ.1000ಕೋಟಿ ಉಳಿತಾಯವಾಗಲಿದೆ.

**ದೇಶಿಯ ನಿರ್ವಹಣೆ ಮತ್ತು ದುರಸ್ತಿ:** ಸದ್ಯ ದೇಶದಲ್ಲಿ ವಿಮಾನಗಳ ನಿರ್ವಹಣೆ ಮತ್ತು ದುರಸ್ತಿಗೆ ಬೇಕಾದ ಸೌಲಭ್ಯಗಳಿಲ್ಲ. ಇವುಗಳನ್ನು ವಿದೇಶದ ಸಹಾಯದಿಂದ ಮಾಡುತ್ತಿದ್ದೇವೆ. ಕಳೆದ 3 ವರ್ಷಗಳಲ್ಲಿ ಇದಕ್ಕಾಗಿಯೇ ರೂ.2000 ಕೋಟಿ ವೆಚ್ಚ ಮಾಡಲಾಗಿದೆ. ಈ ವಲಯದಲ್ಲಿ ಅಂದರೆ ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಪರೀಕ್ಷೆಗೆ ಬೇಕಾದ ವ್ಯವಸ್ಥೆ ಮಾಡಿದರೆ ಭಾರತಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಉಳಿತಾಯವಾಗುತ್ತದೆ.

ಆಧಾರ : ಉದಯವಾಣಿ, ದಿನಾಂಕ:17.08.2020